





ದಕ್ಷಿಣ ಕನ್ನಡ ಜಿಲ್ಲೆಯ ರೈತರ ಬಾಯಲ್ಲಿ 'ಮೊಂಟೆ' ಶಬ್ದ ಜನಜನಿತ. ಹಸುಗಳ ಕುತ್ತಿಗೆಗೆ ಕಟ್ಟುವ ಬಿದಿರಿನಿಂದ ತಯಾರಿಸಿದ ಉಪಕರಣವಿದು. ಕಾಡಿನಲ್ಲಿ ದನಗಳನ್ನು ಸುಲಭವಾಗಿ ಗುರುತಿಸಲು ಇದು ಸಹಾಯಕಾರಿ. ಇದೊಂದು ರೀತಿಯ ಸಂಗೀತ ನಾದ ಹೊಮ್ಮಿಸುವಂಥದು. ತುಳು ಭಾಷೆಯಲ್ಲಿ ಇದನ್ನು 'ಬೊಂಕ' ಎಂದೂ ಕರೆಯುತ್ತಾರೆ.

ಶಿರಾಡಿ ಪರ್ವತದ ಮಗ್ಗುಲಲ್ಲಿ ಕಾಡಿನಿಂದಾವೃತ ಶಿಬಾಜೆ ಗ್ರಾಮವಿದೆ. ಹಸಿರಿನಿಂದ ನಳನಳಿಸುವ ತೋಟಗಳಿಂದಾಗಿ ಕಾಡು ಪ್ರಾಣಿಗಳ ಆವಾಸ ಸ್ಥಾನವೂ ಹೌದು. ಈ ಭಾಗದ ಕೃಷಿಕರು ತಮ್ಮ ಹಸುಗಳನ್ನು ಸಮೀಪದ ಗುಡ್ಡಗಾಡು ಪ್ರದೇಶಗಳಿಗೆ ಮೇಯಲು ಬಿಡುವುದು ವಾಡಿಕೆ. ಈ ಹಸುಗಳು ಮೇಯುತ್ತಾ ಮೇಯುತ್ತಾ ದೂರಕ್ಕೆ ಹೋದಲ್ಲಿ, ಅಥವಾ ದೊಡ್ಡ ದೊಡ್ಡ ಪೊದೆಗಳೊಳಗೆ ಇದ್ದಲ್ಲಿ, ಇರುವಿಕೆಯ ಗುರುತು ಮಾಲೀಕನಿಗೆ ಸುಲಭ ಆಗಲೆಂದು ಅವುಗಳ ಕೊರಳಿಗೆ ವಿಶಿಷ್ಟವಾಗಿ ಸದ್ದು ಮಾಡುವ ಬಿದಿರಿನ 'ಮೊಂಟೆ'ಗಳನ್ನು (ಬೊಂಕಗಳನ್ನು) ಕಟ್ಟುತ್ತಾರೆ. ಮೊಂಟೆಯ ಶಬ್ದವು ಭಿನ್ನ ಹಾಗೂ ಎಷ್ಟೇ ದೂರದಲ್ಲಿ ಹಸುವಿದ್ದರೂ ಎಲ್ಲರ ಕಿವಿಯನ್ನು ಸೆಳೆಯುತ್ತದೆ.

ಅದೇ ರೀತಿ ರೈತರು ಮೇಯಲು ಬಿಟ್ಟ ತಮ್ಮ ಗೋವುಗಳನ್ನು ಕಾಡಿನ ಹುಲಿಗಳು ತಿನ್ನಬಾರದೆಂದು ಇಲ್ಲಿನ 'ದುರ್ಗಾಪರಮೇಶ್ವರಿ' ದೇವರ ಸನ್ನಿಧಿಯಲ್ಲಿ ಪ್ರಾರ್ಥಿಸಿ ಎರಡು 'ಮೊಂಟೆ'ಗಳನ್ನು ಸಮರ್ಪಿಸುತ್ತಾರೆ. ಒಂದನ್ನು ದೇವರಿಗೆ ಮತ್ತೊಂದನ್ನು ಹಸುವಿನ ಕೊರಳಿಗೆ ಕಟ್ಟಿ ಹುಲ್ಲುಗಾವಲಿಗೆ ಮೇಯಲು ಬಿಡುತ್ತಿದ್ದರು. ಹೀಗೆ ಮಾಡಿದಲ್ಲಿ ಹಸುವನ್ನು ಹುಲಿಗಳು ತಿನ್ನಲಾರವೆಂಬ ನಂಬಿಕೆಯಿದೆ. ದೇವಾಲಯಕ್ಕರ್ಪಿಸಿದ ಮೊಂಟೆಗಳನ್ನು ದೇವಾಲಯದ ಸುತ್ತ ತೂಗು ಹಾಕಿರುವುದನ್ನು ನೋಡಬಹುದು.

ಈ ದೇವಾಲಯದ ಪೂಜೆಯ ಸಂದರ್ಭದಲ್ಲಿ ಭಕ್ತಾದಿಗಳು ವಿವಿಧ ಸಂಗೀತ ವಾದ್ಯಗಳನ್ನು ಮೊಳಗಿಸುವಾಗ ಅದರ ಜೊತೆಗೆ ಅಲ್ಲಿ ನೇತುಹಾಕಲಾಗಿರುವ ಮೊಂಟೆಗಳನ್ನು ಕೈಗಳಿಂದ ಅಲ್ಲಾಡಿಸುತ್ತಾರೆ. ವಿವಿಧ ಗಾತ್ರ, ಗುಣಮಟ್ಟದ ಮೊಂಟೆಗಳನ್ನು ಅಲ್ಲಾಡಿಸುವಾಗ ವೈವಿಧ್ಯಮಯ ನಾದ ಹೊರಹೊಮ್ಮುತ್ತದೆ. ಈ ಸ್ಥಳಕ್ಕೆ 'ಮೊಂಟೆತಡ್ಕ'ವೆಂಬ ಸ್ಥಳನಾಮವು ಪ್ರಾಪ್ತವಾಗಿದೆ. ವಿವಿಧ ರೋಗಗಳಿಂದ ಬಳಲುತ್ತಿರುವ ವ್ಯಕ್ತಿಗಳು ತಮ್ಮ ರೋಗಗ್ರಸ್ತಾಂಗಗಳ ಬೆಳ್ಳಿಯ ಅಥವಾ ಚಿನ್ನದ ಪ್ರತಿರೂಪವನ್ನು ಹಾಗೂ ಶ್ವಾಸಕೋಶದ ವ್ಯಾಧಿ ಪೀಡಿತರು ಬೆಳ್ಳಿಯ ಸರಿಗೆ ಅಥವಾ ಬಾವಿಯ ಹಗ್ಗವನ್ನು ಹರಕೆಯನ್ನಾಗಿ ಒಪ್ಪಿಸುತ್ತಿದ್ದು ಇದರ ರಾಶಿಯನ್ನು ದೇವಾಲಯದಲ್ಲಿ ಕಾಣಬಹುದು.

ಅದೇ ರೀತಿ ಹಸುಗಳು ರೋಗಗ್ರಸ್ತವಾದಾಗ, ಹಾಲು ಕರೆಯಲು ಬಿಡದೇ ಇದ್ದಾಗ, ಹಸು ಕರು ಹಾಕದೇ ಇದ್ದಾಗ ಹಾಗೂ ಹಸುಗಳ ಮೈಯಲ್ಲಿ 'ಉಣ್ಣೆ'ಗಳಾದಾಗ (ಹೇನು) ಅವುಗಳ ನಿವಾರಣೆಗಾಗಿ ಈ ದೇವಾಲಯಕ್ಕೆ ಹರಕೆ ಹೇಳುವುದೂ ಸಾಮಾನ್ಯವಾಗಿದೆ. ಕಾಡಿಗೆ ಮೆಯಲು ಬಿಟ್ಟ ಹಸುಗಳು ಕಾಣೆಯಾದ ಸಂದರ್ಭದಲ್ಲಿ ಅವುಗಳು ಮರಳಿ ದೊರೆತಲ್ಲಿ ಈ ದೇವಾಲಯಕ್ಕೆ ವಿಶೇಷ ಸೇವೆ ನೀಡುವುದಾಗಿ ಮಾಲೀಕರು ಹರಕೆಯನ್ನು ಹೊತ್ತುಕೊಳ್ಳುತ್ತಾರೆ. ಮದುವೆಯಾಗದ ಕನ್ಯೆಯರು ಇಲ್ಲಿ 'ಕುಂಕುಮಾರ್ಚನೆ' ಮಾಡಿಸಿದರೆ ಶೀಘ್ರ ಕಂಕಣಬಲ ಕೂಡಿಬರುವುದೆಂಬ ನಂಬಿಕೆಯೂ ಇಲ್ಲಿನ ಭಕ್ತರಲ್ಲಿದೆ.

ಬ್ರಿಟಿಷ್ ಕಾಲದ ಕೆಲ ಅಧಿಕಾರಿಗಳು ಈ ದೇವಾಲಯದ ಸುತ್ತಮುತ್ತಲಿನ ಹತ್ತು ಎಕರೆ ಜಮೀನನ್ನು 'ದೇವರ ಕಾಡು' ಎಂದು ಪರಿಗಣಿಸಿ ಇದನ್ನು ಸಂರಕ್ಷಿತ ಪ್ರದೇಶವೆಂದು ಅರಣ್ಯ ಖಾತೆಯ ಪುಸ್ತಕದಲ್ಲಿ ಬರೆದಿಟ್ಟರೆಂದು ಇತಿಹಾಸದಲ್ಲಿ ಉಲ್ಲೇಖವಿದೆ.

ಎಲ್ಲಾ ದೇವಾಲಯಗಳಲ್ಲಿ ದೇವರು ಸಾಮಾನ್ಯವಾಗಿ ಪೂರ್ವಕ್ಕೆ ಮುಖ ಮಾಡಿದ್ದರೆ, ಈ ದೇವಾಲಯದಲ್ಲಿ ದೇವಿಯು ಉತ್ತರದೆಡೆಗೆ ಮುಖ ಮಾಡಿ ಪ್ರವೇಶ ದ್ವಾರವೂ ಪೂರ್ವ ದಿಕ್ಕಿನ ಬದಲು ಉತ್ತರ ದಿಕ್ಕಿನೆಡೆಗೆ ಇದೆ. ಇಲ್ಲಿನ ದೇವಾಲಯಗಳಲ್ಲಿ ದೇವಿ ಬಿಂಬವಿಲ್ಲವಾಗಿದ್ದು ಬದಲಾಗಿ ಕೇವಲ ಶಿಲಾಕೃತಿಯಷ್ಟೇ ಇರುವುದು ಇಲ್ಲಿನ ವಿಶೇಷತೆ. ಇಲ್ಲಿ ಹವ್ಯಾಸಿ ಕಲಾವಿದರಿಂದ ನಿರ್ವಹಿಸಲ್ಪಡುತ್ತಿರುವ 'ಮೊಂಟೆತಡ್ಕ ಶ್ರೀ ದುರ್ಗಾಪರಮೇಶ್ವರಿ ಪ್ರಸಾದಿತ ಯಕ್ಷಗಾನ ಮಂಡಳಿ ಭಂಡಿಹೊಳೆ' ಎಂಬ ಯಕ್ಷಗಾನ ಮೇಳವಿದ್ದು ವಿಶೇಷ ಸಂದರ್ಭಗಳಲ್ಲಿ ಅಥಿತಿ ಹಾಗೂ ಹವ್ಯಾಸಿ ಕಲಾವಿದರ ಒಗ್ಗೂಡುವಿಕೆಯೊಂದಿಗೆ ಯಕ್ಷಗಾನವನ್ನೂ ನಡೆಸುತ್ತಿರುವುದು ಇಲ್ಲಿನ ವಿಶೇಷತೆಗಳಲ್ಲೊಂದು.

ಮೊಂಟೆತಡ್ಕಕ್ಕೆ ಮಂಗಳೂರು–ಉಪ್ಪಿನಂಗಡಿ–ಕೊಕ್ಕಡದಿಂದ ಶಿಶಿಲ ರಸ್ತೆಯ ಮೂಲಕ, ಬೆಂಗಳೂರು–ಧರ್ಮಸ್ಥಳ ರಸ್ತೆಯಲ್ಲಿ ಕೊಕ್ಕಡ ಮೂಲಕ ಶಿಶಿಲ ರಸ್ತೆಯ ಮೂಲಕ, ಧರ್ಮಸ್ಥಳದಿಂದ ಕೊಕ್ಕಡಕ್ಕೆ ಸಾಗುವ ದಾರಿಯಲ್ಲಿ ಶಿಶಿಲ ರಸ್ತೆಯ ಮೂಲಕ ಅರಸಿನಮಕ್ಕಿಯಲ್ಲಿ ಬಲ ತಿರುವಿನೊಂದಿಗೆ ಪ್ರಯಾಣಿಸಬಹುದಾಗಿದ್ದು, ಟಾರು ರಸ್ತೆಯಿದೆ. ಕೊಕ್ಕಡದಿಂದ ಸುಮಾರು ಹತ್ತು ಕಿಮೀ ದೂರದಲ್ಲಿ ಈ ದೇವಾಲಯವಿದ್ದು, ಇಲ್ಲಿಗೆ ಸರಕಾರಿ ಮತ್ತು ಖಾಸಗಿ ಬಸ್ ಹಾಗೂ ಕೊಕ್ಕಡದಿಂದ ಸರ್ವೀಸ್ ಜೀಪ್‌ಗಳು ಹಾಗೂ ಅಟೋ ರಿಕ್ಷಾ ವ್ಯವಸ್ಥೆಯೂ ಇದೆ. ಇಲ್ಲಿ ಬೆಳಗ್ಗೆ 7.00 ಗಂಟೆಗೆ, ಮಧ್ಯಾಹ್ನ 12.00 ಗಂಟೆಗೆ, ರಾತ್ರಿ 06.00 ಗಂಟೆಗೆ ಇಲ್ಲಿ ಮಹಾ ಪೂಜೆ ನಡೆಯುತ್ತದೆ.